## 11. ಸರ್ಕಾರಿ ಪ್ರೌಢಶಾಲೆ ಹರಗಿ, ಶಿಕಾರಿಪುರ ತಾ!!

ಸರ್ಕಾರಿ ಪ್ರೌಢಶಾಲೆ ಹರಗಿ ಇದು ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನಲ್ಲಿದೆ. ಇದು ಜಿಲ್ಲಾ ಕೇಂದ್ರದಿಂದ ಸುಮಾರು 95 ಕೀ.ಮಿ ದೂರದಲ್ಲಿದ್ದು ಶಿವಮೊಗ್ಗ ಹಾನಗಲ್ ಮಾರ್ಗ ಮಧ್ಯ ಶ್ರೀ ಮಲ್ಲಿಕಾರ್ಜುನ ಕ್ಷೇತ್ರವಾದ ತೊಗರ್ಸಿಯಿಂದ 6 ಕೀ.ಮಿ ದೂರದಲ್ಲಿದೆ. ಈ ಶಾಲೆಯು ಜುಲೈ 1996 ರಲ್ಲಿ ಮೊದಲು ಊರಿನ ದೇವಸ್ಥಾನದಲ್ಲಿ ಆರಂಭವಾಗಿ, ತದನಂತರ ಈಗಿರುವ ಜಾಗದಲ್ಲಿ 2000–2001 ರಲ್ಲಿ ಆರಂಭವಾಗಿದೆ. ಈ ಶಾಲೆಯು ಸುಮಾರು 5.20 ಗುಂಟೆ ಜಾಗದಲ್ಲಿ ವಿಸ್ತಾರವಾದ ಭೂ ಪ್ರದೇಶದಲ್ಲಿದೆ ಈ ಶಾಲೆಯು ಕನ್ನಡ ಮಾಧ್ಯಮದಲ್ಲಿದ್ದು 10 ಜನ ಶಿಕ್ಷಕರು ಒಬ್ಬ ದ್ವಿತೀಯ ದರ್ಜೆ ಸಹಾಯಕರು 120 ಮಕ್ಕಳು ಮೂರು ಜನ ಅಡಿಗೆಯವರು ಇರುತ್ತಾರೆ. ಸುಮಾರು 12 ಕೊಠಡಿಗಳಿದ್ದು ಮೂರು ತರಗತಿ ಕೋಣೆಗಳು ಉಳಿದವು 1) ಕಂಪ್ಯೂಟರ್ ರೂಂ 2) ಲ್ಯಾಬ್ 3) ಆರ್ಟ್ ಗ್ಯಾಲರಿ 4) ಕ್ರೀಡಾ ರೂಂ 5) ಗ್ರಂಥಾಲಯ 6) ಸಾಂಸ್ಕೃತಿಕ ಭವನ ಎಂದು ಈ ಶಾಲೆಯ ಮೈದಾನದಲ್ಲಿ ಹಲವಾರು ವಿವಿಧ ತಳಿಯ ಸುಮಾರು 500ಕ್ಕೂ ಹೆಚ್ಚು ಗಿಡ ಮರಗಳನ್ನು ಬೆಳೆಸಲಾಗಿದೆ. ಶಾಲೆಗೆ ಸ್ವಂತ ಬೋರ್‌ವೆಲ್ ಇದೆ. ಗಣಕಯಂತ್ರ ಮತ್ತು ಸ್ಮಾರ್ಟ್‌ಕ್ಲಾಸ್ ನಿರ್ವಹಣೆಗಾಗಿ ಸೋಲಾರ್ ವ್ಯವಸ್ಥೆ ಕಲ್ಪಿಸಲಾಗಿದ (ದಾನಿಗಳಿಂದ) ಈ ರೀತಿಯಾಗಿ ಮತ್ತು ಇನ್ನು ಅನೇಕ ಸೌಲಭ್ಯಗಳ ಮೂಲಕ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಉತ್ತಮವಾದ ಶಿಕ್ಷಣವನ್ನು ಒದಗಿಸುವ ನಿಟ್ಟಿನಲ್ಲಿ ಶಾಲೆಯ ಮುಖ್ಯೋಪಾಧ್ಯಾಯರ ನೇತೃತ್ವದಲ್ಲಿ ಎಲ್ಲಾ ಶಿಕ್ಷಕವೃಂದದವರು ಉತ್ತಮವಾದ ಶಿಕ್ಷಣ ನೀಡುತ್ತಿದ್ದು ಮತ್ತು ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯವರು ಸಹಕಾರದ ಮೂಲಕ ಶಾಲಾಭಿವೃದ್ಧಿಗೆ ಮತ್ತು ವಿದ್ಯಾರ್ಥಿಗಳ ಶೈಕ್ಷಣಿಕ ಉನ್ನತಿಗಾಗಿ ಎಲ್ಲರೂ ಶ್ರಮಿಸುತ್ತಿದ್ದಾರೆ.




**ಶಾಲಾ ಕಟ್ಟಡದ ಹೊರ ನೋಟ**








ಸರ್ಕಾರಿ ಪ್ರೌಢ ಶಾಲೆ.ಹರಗಿ






ಸರ್ಕಾರಿ ಪ್ರೌಢಶಾಲೆ ಹರಗಿ

ಸುಸಜ್ಜಿತವಾದ ನಾವಿನ್ಯ ಮಾದರಿಯ ಉತ್ತಮವಾದ ಗಾಳಿ ಬೆಳಕನ್ನು ಹೊಂದಿದ ತರಗತಿ ಕೊಠಡಿಗಳು ಮತ್ತು ಎಲ್ಲಾ ತರಗತಿ ಕೊಠಡಿಗಳಲ್ಲಿ ಪ್ರೋಜೆಕ್ಟರ್ ಅಳವಡಿಸಿ ವಿದ್ಯಾರ್ಥಿಗಳಿಗೆ ಸ್ಮಾರ್ಟ್‌ಕ್ಲಾಸ್ ಮೂಲಕ ಬೋಧನೆ ಮಾಡಲಾಗುತ್ತಿದೆ. ಉತ್ತಮವಾದ ಕ್ರೀಡೋಪಕರಣಗಳನ್ನು ಹೊಂದಿದ ಕ್ರೀಡಾಕೊಠಡಿಯು ಹೊಸ ವಿಧಧ ಕ್ರೀಡೋಪಕರಣಗಳನ್ನು ಹೊಂದಿದ್ದು ಹಾಗೂ ವಿದ್ಯಾರ್ಥಿಗಳ ದೈಹಿಕ ಸಾಮರ್ಥ್ಯವನ್ನು ಹೆಚ್ಚಿಸಲು ವಿದ್ಯಾರ್ಥಿಗಳಿಗೆ ವ್ಯಾಯಮ ಶಾಲೆಯ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

ಹಳೆಯ ವಿದ್ಯಾರ್ಥಿಗಳು ಮತ್ತು ದಾನಿಗಳ ನೆರವಿನಿಂದ ಮೂರು ತರಗತಿಗಳಿಗೂ ಪ್ರಾಜೆಕ್ಟರ್ ಮೂಲಕ ಬೋಧನೆ ಮಾಡಲಾಗುತ್ತದೆ ಹಾಗೂ ಶಾಲೆಯಲ್ಲಿ ಐ.ಸಿ.ಟಿ ಫೇಸ್–2 ಯೋಜನೆಯ ಗಣಕಯಂತ್ರ ಶಿಕ್ಷಣವನ್ನು ನೀಡಲಾಗುತ್ತಿದ್ದು ಪ್ರತಿಯೊಬ್ಬ ವಿದ್ಯಾರ್ಥಿಗಳು ಕಂಪ್ಯೂಟರ್ ಶಿಕ್ಷಣವನ್ನು ಪಡೆಯುತ್ತಿದ್ದರೆ ಅಲ್ಲದೆ ಎಲ್ಲಾ ಶಿಕ್ಷಕರು ಸಹ ಕಂಪ್ಯೂಟರನ ಬಳಕೆ ಮಾಡಿಕೊಂಡು ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಆಧಾರಿತ ಶಿಕ್ಷಣವನ್ನು ನೀಡುತ್ತಿದ್ದಾರೆ.





**ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಶಿಕ್ಷಣ**







**ವಿದ್ಯಾರ್ಥಿಗಳಿಗೆ ಸ್ಮಾರ್ಟ್‌ಕ್ಲಾಸ್ ಶಿಕ್ಷಣ**

ಈ ಶಾಲೆಯು ಸುಸಜ್ಜಿತವಾದ ವಿಜ್ಞಾನ ಪ್ರಯೋಗಾಲಾಯವನ್ನು ಹೊಂದಿದ್ದು ಎಲ್ಲಾ ರೀತಿಯ ಉಪಕರಣಗಳು ಸುವ್ಯವಸ್ಥಿತವಾಗಿದ್ದು ವಿಜ್ಞಾನ ಶಿಕ್ಷಕರ ಮಾರ್ಗದರ್ಶನದಲ್ಲಿ ಸ್ವತಃ ವಿದ್ಯಾರ್ಥಿಗಳು ತುಂಬಾ ಉತ್ಸಾಹದಿಂದ ಪ್ರಯೋಗವನ್ನು ಮಾಡುವುದರ ಮುಖಾಂತರ ವಿಜ್ಞಾನ ಶಿಕ್ಷಣವನ್ನು ಪಡೆಯುತ್ತಿದ್ದಾರೆ.ಈ ಶಾಲೆಯು ಎಲ್ಲಾ ವಿಧಧ ಪುಸ್ತಕಗಳನ್ನು ಹೊಂದಿದ ಉತ್ತಮವಾದ ಗ್ರಂಥಾಲಯವನ್ನು ಹೊಂದಿದ್ದು ವಿದ್ಯಾರ್ಥಿಗಳಿಗೆ ಅವಶ್ಯಕವಾದ ಪುಸ್ತಕಗಳನ್ನು ಒದಗಿಸಲಾಗುವುದು ಅಲ್ಲದೆ ವಿದ್ಯಾರ್ಥಿಗಳಿಗೆ ಬಿಡುವಿನ ವೇಳೆಯಲ್ಲಿ ಅಭ್ಯಾಸ ಮಾಡಲು ಗ್ರಂಥಾಲಯದಲ್ಲಿ ರೀಡಿಂಗ್ ರೂಂನ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ

## ವಿಜ್ಞಾನ ಪ್ರಯೋಗಾಲಯದಲ್ಲಿ ಪ್ರಯೋಗದಲ್ಲಿ ನಿರತ ವಿದ್ಯಾರ್ಥಿಗಳು








ಈ ಶಾಲೆಯು ಉತ್ತಮವಾದ ವಿಶಾಲವಾದ ಭೂಪ್ರದೇಶವನ್ನು ಹೊಂದಿದ್ದು ಶಾಲಾ ಆವರಣದಲ್ಲಿ ವಿದ್ಯಾರ್ಥಿಗಳ ಶಿಕ್ಷಕರ ಹಾಗೂ ಎಸ್.ಡಿ.ಎಂ.ಸಿ ಸದಸ್ಯರ ಶ್ರಮ ಹಾಗೂ ಸಹಕಾರದಿಂದ ವೈವಿಧ್ಯಮಯ ಹಣ್ಣಿನ, ಹೂವಿನ, ಅಲಂಕಾರಿಕ ಹಾಗೂ ಔಷಧಿಯ ಸಸ್ಯಗಳನ್ನು ಬೆಳಸಲಾಗಿದ್ದು ವಿದ್ಯಾರ್ಥಿಗಳು ಸಸ್ಯಗಳನ್ನು ದತ್ತು ಪಡೆದು ಅವುಗಳ ಆರೈಕೈಯನ್ನು ಮಾಡುತ್ತಿದ್ದಾರೆ ಹಾಗೂ ಶಾಲೆಯಲ್ಲಿ ಬೆಳೆದ ತರಕಾರಿ ಗಳನ್ನು ಬಿಸಿಊಟಕ್ಕೆ ಬಳಸಿಕೊಂಡು ಹಣ್ಣುಗಳನ್ನು ವಿದ್ಯಾರ್ಥಿಗಳಿಗೆ ವಿತರಿಸಲಾಗುವುದು ವಿಶೇಷ ಸಂದರ್ಭಗಳಲ್ಲಿ ವಿದ್ಯಾರ್ಥಿಗಳು ಹಾಗೂ ಶಿಕ್ಷಕರಿಗೆ ಬಾಳೆಎಲೆಯ ಊಟವನ್ನು ಒದಗಿಸಲಾಗುವುದು. ಅಲ್ಲದೆ ಸುಂದರ ಪರಿಸರದಲ್ಲಿ ವಿದ್ಯಾರ್ಥಿಗಳು ಸಂಜೆ ವೇಳೆಯಲ್ಲಿ ಗುಂಪು ಅಧ್ಯಯನವನ್ನು ಮಾಡುತ್ತಾರೆ.













ನಮ್ಮ ಶಾಲೆಯು ಗ್ರಾಮೀಣ ಪ್ರದೇಶದಲ್ಲಿದ್ದು ವಿದ್ಯುತ್ ಅನಿಯಮಿತ ಲೋಡ್ ಶೆಡ್ಡಿಂಗ್‌ನಿಂದಾಗಿ ಶಾಲಾ ಸಮಯದಲ್ಲಿ ವಿದ್ಯುತ್ ಸಮಸ್ಯೆಯಿಂದ ಕುಡಿಯುವ ನೀರು & ಗಣಕಯಂತ್ರ ಆಧಾರಿತ ಬೋಧನೆಗೆ ತೊಂದರೆಯಾದ ಕಾರಣ ದಾನಿಗಳ ನೆರವಿನಂದ 1.5ಲಕ್ಷ ವೆಚ್ಚದಲ್ಲಿ ಸೋಲಾರ್ ವ್ಯವಸ್ಥೆ ಕಲ್ಪಿಸಿಕೊಳ್ಳಲಾಗಿದೆ ಸಂಪೂರ್ಣ ಸೋಲಾರ್ ವ್ಯವಸ್ಥೆ ಕಲ್ಪಿಸಿಕೊಂಡ ಮೊದಲ ಶಾಲೆ ಇದಾಗಿದೆ.